**ಪಾಠ-5** **ಏಪ್ರಿಲ್ 23-29**

# ಬಾಬೆಲ್ ಮತ್ತು ಎಲ್ಲಾ ದೇಶಗಳು



**ಸಬ್ಬತ್ತಿನ ಮಧ್ಯಹ್ನ : ಈ ಪಾಠ ಅಧ್ಯನನಕ್ಕಗಿ ಓದಿರಿ :** ಆದಿಕಾಂಡ 9:18 ರಿಂದ 11:9 ವಚನಗಳು, ಲೂಕ 10;1, ಮತ್ತಯ 1:1–17, ಲೂಕ 1:26–33, ಕೀರ್ತಿ 139:7–12, ಆ.ಕಾಂಡ 1:28, ಆ.ಕಾಂಡ 9:1

**ಸ್ಮರಣ ವಾಕ್ಯ : ಸಮಸ್ತ ಲೋಕದ ಭಾಷೆಯನ್ನು ಯಹೋವನು ಅಲ್ಲಿ ತಾರುಮಾರು ಮಾಡಿ ಅವರನ್ನು ಚದರಿಸಿದ್ದರಿಂದ ಆ ಪಟ್ಟಣಕ್ಕೆ ಬಾಬೆಲ್ ಎಂದು ಹೆಸರಾಯಿತು (ಆ.ಕಾಂಡ 11:9)**

ಅವರನ್ನು ಚರದರಿಸಿದ ನಂತರ ಏಕವ್ಯಕ್ತಿಯಾದ ನೋಹನ ಮೇಲಿನ ಸತ್ಯವೇದದ ದೃಷ್ಟಿಯು ಆತನ ಮೂವರು ಮಕ್ಕಳಾದ ಶೇಮ್, ಹಾಮ್ ಮತ್ತು ಯೆಫೆತ್ ಮೇಲೆ ಹರಿಯುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ ಕಾನಾನನ ತಂದೆಯಾದ ಹಾಮನ ಮೇಲೆ (ಆ.ಕಾಂಡ 10:6,15) ಹರಿಯುತ್ತದೆ. ಇದು ಭೂಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದನಿಧಿಯಾದ ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟ 'ಕಾನಾನ್' ಎಂಬ ಆಲೋಚನೆಯನ್ನು ಪರಿಚಯಿಸುತ್ತದೆ (ಆ.ಕಾಂಡ 12:3)

ಆದರೆ ಈ ಸರಣಿಯು ಬಾಬೆಲ್ ಗೋಪುರದಿಂದ ಮುರಿಯಲ್ಪಟ್ಟಿತು (ಆ.ಕಾಂಡ 11:1–9) ಆದುದರಿಂದ ಮಾನವರ ಮೇಲೆ ದೇವರು ಹೋಂದಿದ್ದ ಯೋಜನೆಗೆ ಅಡಚಣೆಯಾಯಿತ್ತು. ಎಲ್ಲ ದೇಶಗಳ ಹುಟ್ಟಿನಿಂದ ಯಾವುದು ಆಶೀರ್ವಾದದಾಯಕವಾಗಬೇಕಿತ್ತೋ ಅದು ಮತ್ತೊಂದು ಶಾಪಕ್ಕೆ ಸಂದರ್ಭವಾಯ್ತು.

* ಈ ಪಾಠ ಏಪ್ರಿಲ್ 30ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.

ಜನಾಂಗಗಳು ನ್ಯಾಯ ತೀರ್ಪಿನ ಕಾರಣದಿಂದ ಗಲಿಬಿಲಿಯುಂಟಾಗಿ ಜನರು ಭೂಲೋಕದಲ್ಲೆಲ್ಲಾ ಚದುರಿ ಹೋದರು (ಆಕಾಂಡ 11:8) ಮತ್ತು ಹೀಗೆ ಮೂಲದಲ್ಲಿ ದೇವರು ಆಶೀರ್ವಾದ ರೂಪದಲ್ಲಿ ಹೇಳಿದ್ದ "ಭೂಲೋಕದಲ್ಲೆಲ್ಲಾ ತುಂಬಿ ಕೊಳ್ಳಿರಿ" ಎಂದು ಹೇಳಿದ್ದ ಮಾತು ನೆರವೇರಿತು (ಆ.ಕಾಂಡ 9:1)

ಅಂತ್ಯದಲ್ಲಿ ಮಾನವನ ದುಷ್ಟತ್ವದ ನಡುವೆಯೂ ದೇವರು ಕೆಟ್ಟದನ್ನು ಒಳ್ಳೆಯದಕ್ಕೆ ತಿರುಗಿಸಿದನು. ಯಾವಾಗಲೂ ದೇವರದೇ ಕಡೆಯ ಮಾತಾಗಿರುತ್ತದೆ. ತನ್ನ ತಂದೆಯ ಗುಡಾರದಲ್ಲಿ ಹಾಮನಿಗೆ ಕೊಟ್ಟ ಶಾಪ (ಆ.ಕಾಂಡ 9:21,22) ಮತ್ತು ಬಾಬೆಲ್ ಗೋಪುರದಲ್ಲಿ ಗಲಿಬಿಲಿಗೊಂಡ ಜನಾಂಗಗಳಿಗೆ ಕೊಟ್ಟ ಶಾಪ (ಆ.ಕಾಂಡ 11:9) ಅಂತ್ಯದಲ್ಲಿ ಎಲ್ಲಾ ಜನಾಂಗಗಳಿಗೂ ಒಂದು ಆಶೀರ್ವಾದವಾಗಿ ತಿರುಗಿಕೊಂಡಿದೆ.

**ಭಾನುವಾರ** **ಏಪ್ರಿಲ್ 24**

## ಹಾಮನಿಗೆ ಕೊಟ್ಟ ಶಾಪ

ಆ.ಕಾಂಡ 9:18–27 ವಚನಗಳನ್ನು ಓದಿರಿ, ಈ ವಿಚಿತ್ರ ಕಥೆಯು ಕೊಡುವ ಸಂದೇಶವೇನು?

ನೋಹನು ತನ್ನ ದ್ರಾಕ್ಷೀತೋಟದಲ್ಲಿ ನಡೆಸಿದ ಕೃತ್ಯವು ಆದಾಮನು ಏದೇನ್ ತೋಟದಲ್ಲಿ ನಡೆಸಿದ ಕೃತ್ಯವನ್ನು ಪ್ರತಿಧ್ವನಿಸುತಾದೆ. ಈ ಎರಡು ಕಥೆಗಳು ಒಂದು ಸಾಮಾನ್ಯ ಆಶಯವನ್ನೊಂದಿದೆ. ಏನೆಂದರೆ ಹಣ್ಣನ್ನು ತಿನ್ನುವುದು, ಅದರ ನಿಮಿತ್ತ ಬೆತ್ತಲಾಗುವುದು ನಂತರ ಮುಚ್ಚಿಕೊಳ್ಳುವುದು, ಶಾಪ ಮತ್ತು ಆಶೀರ್ವದ. ನೋಹನು ತನ್ನ ಮೂಲ ಅದಾಮನು ಬೇರಿಗೆ ಮರಳಿ ಸೇರಿಸಿಕೊಳ್ಳುತ್ತಾನೆ ಮತ್ತು ದೌರ್ಭಗ್ಯವೆಂಬಂತೆ ವಿಫಲವಾದ ಚರಿತ್ರೆಯನ್ನು ಮುಂದುವರೆಸುತ್ತಾನೆ.

ಫಲಗಳನ್ನು ನೆನೆಹಾಕಿ ಹುಳಿ ಬರಿಸಿಕೊಂಡು ಸೇವಿಸುವುದು ದೇವರ ಸೃಷ್ಟಿಯ ಅಸಲಿ ಭಾಗವಾಗಿರಲಿಲ್ಲ. ನೋಹಾನು ಇದನ್ನು ಸೇವಿಸಿ ಮತ್ತನಾದನು ಮತ್ತು ಬೆತ್ತಾಲಾಗಿ ಬಿದ್ದುಕೊಂಡಿದ್ದನು. ಹಾಮನು ತನ್ನ ತ್ಂದೆಯ ಬೆತ್ತಲೆತನವನ್ನು ನೋಡಿದುದು ಹವ್ವಳು ತಿನ್ನಬಾರದ ಹಣ್ಣಿನ ಮರ ನೋಡಿದುದನ್ನು ನೆನೆಪಿಗೆ ತರುತ್ತದೆ (ಆ.ಕಾಂಡ 3:6). ಈ ಹೋಲಿಕೆಯು ಹಾಮ ಬೇಕೆಂದು ಕದ್ದುಮುಚ್ಚಿ ಮಾಡಿದ ಕೃತ್ಯವಾಗಿರಲಿಲ್ಲ ಆದರೆ ಇದು ಒಂದು ಆಕಸ್ಮಿಕವಾಗಿ ಜರುಗಿದ

ಘಟನೆಯಾಗಿತ್ತು. ಆತನು ಈ ವಿಷಯವನ್ನು ಬಹಿರಂಗವಾಗಿ ಮಾತಾಡುತ್ತಾ ತನ್ನ ತಂದೆಯ ಬೆತ್ತಲೆಯನ್ನು ಮುಚ್ಚುವುದಕ್ಕೆ ಪ್ರಯತ್ನ ಪಡದೆಹೋದನು. ಆದರೆ ಆತನ ಸೋದರರು ಕೂಡಲೆ ತಂದೆಗೆ ಕಂಬಳಿಯನ್ನು ಹೊದಿಸಿ ತಂದೆಯ ಮಾನವನ್ನು ಕಾಪಡಿದರು ಆದರೆ ಹಾಮನು ಇದನ್ನು ನೋಡಿಯು ಸುಮ್ಮನಿದ್ದುಬಿಟ್ಟನು ಆದುರಿಂದ ಅವನ ಈ ಕೃತ್ಯವು ಆಪಾದನೆಗೆ ಗುರಿಯಾಯಿತು.

ಖಂಡಿತವಾಗಿಯು ಈ ನಿದರ್ಶನವನ್ನು ಜನಾಂಗೀಯ ದ್ವೇಷವನ್ನು ಸಮರ್ಥಿಸಿಕೊಳ್ಳಲು ಯಾರಮೇಲಾದರೂ ಉಪಯೋಗಿಸುವುದು ಸೈದ್ಧಾಂತಿಕವಾಗಿ ಮತ್ತು ನೈತಿಕವಾಕಿ ಒಂದು ದೊಡ್ಡ ಪ್ರಮಾದವಾಗುತ್ತದೆ. ಈಪ್ರವಾದನೆಯು ಹಾಮನ ಮಗನಾದ ಕಾನಾನ್ಯನಿಗೆ ಮಿತಿಗೊಳ್ಳುತ್ತದೆ. ಸತ್ಯವೇದದ ಬರಹಗಾರ ಕಾನಾನ್ಯರ ಕೆಲವು ಬ್ರಷ್ಟ ಆಚಾರಗಳನು ಮನಸಿನಲ್ಲಿಟ್ಟುಕೊಂಡು ಹೀಗೆ ಹೇಳಿದಾನೆ. (ಆ.ಕಾಂಡ 19:5–7, 31–35).

ಇಷ್ಟುಮಾತ್ರವಲ್ಲದೆ, ಕಾನಾನನ ಶಾಪದ ಜೊತೆಗೆ ಆಶೀರ್ವಾದದ ವಾಗ್ದಾನವು ಸಹ ಸೇರಿಕೊಂಡಿದೆ, ಕಾನಾನ ಎಂಬುದು ಕಾನಾ ಎಂಬ ಕ್ರಿಯಾಪದದಿಂದ ಹುಟ್ಟಿದೆ. ಇದು ಜಯಿಸು (ನಿಗ್ರಹಿಸು) ಎಂಬ ಅರ್ಥ ಕೊಡುತ್ತದೆ. ಹಾಗೆಯೆ ಶೇಮ್‌ನ ಸಂತಾನದವರಾದ ಇಸ್ರಾಯೇಲ್ಯರು ಕಾನಾನ್ಯರನ್ನು ನಿಗ್ರಹಿಸಿಕೊಂಡು ತನಗೆ ವಾಗ್ದಾನವಾಗಿ ಕೊಟ್ಟಿದ್ದ ದೇಶವನ್ನು ಪ್ರವೇಶಿಸಿದರು ಮತ್ತು ಬರಬೇಕಾದ ಮೆಸ್ಸೀಯನಿಗೆ ಮಾರ್ಗವನ್ನು ಸಿದ್ಧಪಡಿಸಿದರು.

ಈ ಮೆಸ್ಸಿಯನು ಶೇಮ್‌ನ ಗುಡಾರದಲ್ಲಿ ಯೆಫೆತನನ್ನು ವಿಸ್ತರಿಸುವವನಗಿದ್ದಾನೆ (ಆ.ಕಾಂಡ 9:27). ದೇವರು ತನ್ನ ಒಡಂಬಡಿಕೆಯನ್ನು ಎಲ್ಲಾ ಜನಾಂಗಗಳಿಗೂ ವಿಸ್ತರಿಸುವುದನ್ನು ಈ ಪ್ರಪಾದನೆಯು ಸೂಚಿಸುತ್ತದೆ. ಎಲ್ಲಾ ಜನಾಂಗಗಳು ಇಡೀ ಲೋಕಕ್ಕೆ ರಕ್ಷನೆಯನ್ನು ತರುವ ಇಸ್ರಾಯೇಲ್ಯರ ಸಂದೇಶವನ್ನು ಅಪ್ಪಿಕೊಳ್ಳುತ್ತಾರೆ (ದಾನಿ 9:27, ಯೆಶಾಯ 66:18–20, ರೋಮ 11:25) ಹಾಮನ ಮೇಲೆ ಬಂದ ಶಾಪವು ದಿಟ್ಟವಾಗಿಯು ಎಲ್ಲಾ ದೇಶಗಳಿಗೆ ಆಶೀರ್ವಾದ ದಾಯಕವಾಯಿತು ಇದು ದೇವರ ರಕ್ಷಣೆಯನ್ನು ಅಂಗೀಕರಿಸುವ ಹಾಮನ ಮತ್ತು ಕಾನಾನ ಸಂತಿಯವರನ್ನೆಲ್ಲಾ ಒಳಗೊಂಡಿದೆ.

ಜಲಪ್ರಳಯದ ನಾಯಕನಾದ ನೋಹನು ಕುಡಿದು ಮತ್ತನಾದನು ಎಂಬುದು ಮನುಷ್ಯರಾದ ನಾವು ಎಷ್ಟು ದೋಷಯುಕ್ತರು, ಪ್ರತಿಕ್ಷಣದಲ್ಲೂ ನಮಗೆ ದೇವರ ಕೃಪೆಯು ಅವಶ್ಯಕವಾಗಿದೆ ಎಂಬುದರ ಬಗ್ಗೆ ನಮಗೆ ಏನನ್ನು ಹೇಳುತ್ತದೆ?

**ಸೋಮವಾರ** **ಏಪ್ರಿಲ್–25**

## ಆದಿಕಾಂಡದ ವಂಶಾವಳಿ

ನೋಹನ ವಯಸ್ಸಿನ ಬಗ್ಗೆ ಇರುವ ಕಾಲಾನುಕ್ರಮದ ಮಾಹಿತಿಯು ನೋಹನು ಜಲಪ್ರಳಯದ ಮೊದಲಿದ್ದ ಮತ್ತು ನಂತರವಿದ್ದ ನಾಗರೀಕತೆಗಳನ್ನು ಬೆಸೆಯುವ ಕೊಂಡಿಯ ಪಾತ್ರವನ್ನುವಹಿಸುತ್ತದೆ ಎಂಬುದನ್ನು ನಮ್ಮ ಅರಿವಿಗೆ ತರುತ್ತದೆ. ಈ ಕಥೆಯ ಅಧ್ಯಾಯದ ಕಡೆಯ ಎರಡು ವಚನಗಳು (ಆ.ಕಾಂಡ 9:28,29) ನಮ್ಮನ್ನು ಆದಾಮನ ವಂಶಾವಳಿಗೆ ಕರೆದುಕೊಂಡು ಹೋಗುತ್ತವೆ (ಆ.ಕಾಂಡ 5:32). ನೋಹನ ತಂದೆಯಾದ ಲೆಮೆಕನು 56 ವರ್ಷದ ವಯಸ್ಸಿನವನಾಗಿದ್ದಾಗ ಆದಾಮನು ಮರಣ ಹೊಂದಿದನು. ಆದುದರಿಂದ ನೋಹನಿಗೆ ಆದಾಮನನ್ನು ಕುರಿತ ಕಥೆಗಳು ಗೊತ್ತಿದ್ದವು ಮತ್ತು ಆತನು ಅವುಗಳನ್ನು ತನ್ನ ನಂತರದ ತಲೆಮಾರಿನ ಜನರಿಗೆ ವರ್ಗಾಯಿಸಿದನು.

ಸತ್ಯವೇದದ ವಂಶಾವಳಿಗಳು ಮೂರು ಕಾರ್ಯಗಳನ್ನು ಮಾಡುತ್ತವೆ. ಮೊದಲನೆಯದಾಗಿ, ಇದು ಸತ್ಯವೇದದ ಘಟನೆಗಳು ಚಾರಿತ್ರಿಕವಾದವುಗಳು ಎಂಬುದನ್ನು ಒತ್ತಿಹೇಳುತ್ತವೆ ಈ ವಂಶಾವಳಿಗಳು ನಿಜವಾಗಿ ಬದುಕಿ ಬಾಳಿ ಮರಣ ಹೊಂದಿದ ವ್ಯಕ್ತಿಗಳದ್ದಾಗಿದ್ದು ಅವರ ಜೀವಿತಾವಧಿಯನ್ನು ನಿಖರವಾಗಿ ಹೇಳುತ್ತವೆ. ಎರಡನೆಯದಾಗಿ, ಇದು ಹಿಂದಿನ ಕಾಲದಿಂದ ಹಿಡಿದು ಇದನ್ನು ಬರೆಯುವ ಲೇಖನ ಕಾಲದವರೆಗೆ ಒಂದೇ ಸಮನೆ ಮುಂದುವರೆದುಕೊಂಡು ಬಂದುದನ್ನು ಅಂದರೆ ಭೂತಕಾಲ ಮತ್ತು ಭವಿಷ್ಯಕಾಲವನ್ನು ಸ್ಪಷ್ಟವಾಗಿ ಬೆಸೆದು ನಿರೂಪಿಸುತ್ತದೆ. ಮೂರನೆಯದಾಗಿ, ಇದು ಮನುಷ್ಯನ ಅನಿಶ್ಚಿತತೆಯನ್ನು ಮತ್ತು ಪಾಪಗಳ ಶಾಪವನ್ನು ದುರಂತಮಯ ಪರಿಣಾಮಗಳ ಮತ್ತು ಎಲ್ಲ ಸಂತತಿಯವರಿಗೆ ಹರಿದುಬರುವ ಭಯಂಕರ ಫಲಿತಾಂಶವನ್ನು ನಮ್ಮ ನೆನೆಪಿಗೆ ತರುತ್ತದೆ.

ಹಾಮನ ಸಂತತಿ, ಶೇಮನ ಸಂತತಿ ಮತ್ತು ಯೆಪೆತನ ಸಂತತಿಯವರ ವರ್ಗೀಕರಣವು ಒಂದು ಸ್ಪಷ್ಟವಾದ ಮಾನದಂಡವನ್ನು

ಅನುಸರಿಸುವುದಿಲ್ಲವೆಂಬುದನ್ನು ಗಮನಿಸಿರಿ. ಎಪತ್ತು ದೇಶಗಳು ಯಕೋಬನ ಕುಟುಂಬದ 70 ಜನ ಹಿರಿಯರಿಗೆ ಮುನ್ಸೂಚನೆಯಾಗಿದ್ದವು (ವಿ.ಕಾಂಡ 24:9). ಎಪತ್ತು ದೇಶಗಳ (ಜನಾಂಗಗಳು) ಮತ್ತು 70 ಹಿರಿಯರ ನಡುವೆ ಮಾಡಿರುವ ಹೋಲಿಕೆಯು ಇಸ್ರಾಯೇಲ್ಯರು ಅನ್ಯಜನಾಂಗಗಳಿಗೆ ಮಾಡಬೇಕಾದ ದೈವ ನಿಯಮಿತ ಕಾರ್ಯವನ್ನು ಸೂಚಿಸುತ್ತದೆ. ಪರಾತ್ಪರನಾದ ದೇವರು ಜನಾಂಗಗಳಿಗೆ ಸ್ವಾಸ್ಥ್ಯವನ್ನು ಹಂಚುವಾಗ, ಆತನು ಆದಮನಿಗೆ ಮಕ್ಕಳನ್ನು ಬೇರ್ಪಡಿಸುವಾಗ ಆತನು ಯಕೋಬ್ಯರ ಮಕ್ಕಳ ಸಂಖ್ಯೆಗನುಗುಣವಾಗಿ ಜನಾಂಗಗಳ ಗಡಿಯನ್ನು ನಿಷ್ಕರ್ಷೆಮಾಡಿ ಇಟ್ಟನು (ಧ.ಕಾಂಡ 32:8) ಅದೇ ರೀತಿಯಲ್ಲಿ ಯೇಸುವನ್ನು 70 ಮಂದಿ ಸುವಾರ್ತಿಕರನ್ನು ಕಳುಹಿಸಿದನು (ಲೂಕ 10:1).

ಆದಾಮನಿಗೂ ನಮ್ಮ ಪೂರ್ವಿಕರಿಗೂ ನೇರವಾದ ಸಂಬಂಧವಿತ್ತು ಎಂಬುದನ್ನು ಈ ವಂಶಾವಳಿಗಳು ನಮಗೆ ತೋರಿಸಿಕೊಡುತ್ತವೆ. ಇವೆಲ್ಲ ಚಾರಿತ್ರಿಕ ಅಂಕಿ ಅಂಶಗಳು, ಆದಾಮನ ನಂತರ ಬಂದ ನಿಜವಾದ ವ್ಯಕ್ತಿಗಳು. ನಮ್ಮ ಪೂರ್ವಿಕರು ವಯಕ್ತಿಕವಾಗಿ ಈ ಪೂರ್ವಕಾಲದ ಘಟನೆಗಳ ಬಗ್ಗೆ ಅರಿವಿದ್ದವರ ಸಾಕ್ಷಿಗೆ ನೇರವಾಗಿ ನಿಲುಕುವವರಾಗಿದ್ದರು ಎಂಬುದನ್ನು ಅರಿತುಕೊಳ್ಳಲು ವಂಶಾವಳಿಯು ನಮಗೆ ಸಹಾಯ ಮಾಡುತ್ತದೆ.

ಮತ್ತಯ 1:1–17 ವಚನಗಳನ್ನು ಓದಿರಿ. ಇವರೆಲ್ಲಾ ಹೇಗೆ ಚಾರಿತ್ರಿಕ ವ್ಯಕ್ತಿಗಳಾಗಿದ್ದರು ಎಂಬುದರ ಬಗ್ಗೆ ಇದು ನಮಗೆ ಏನನ್ನು ಭೋಧಿಸುತ್ತತೆ? ಆವರೆಲ್ಲಾ ನಿಜವಾದ ವ್ಯಕ್ತಿಗಳಾಗಿದ್ದರು ಎಂಬುದಾಗಿ ತಿಳಿಯುವುದು ಮತ್ತು ಹಾಗೆ ನಂಬುವುದು ನಮ್ಮ ವಿಶ್ವಾಸಕ್ಕೆ ಮುಖ್ಯವಾಗಿರುತ್ತದೆ ಏಕೆ?

**ಮಂಗಳವಾರ** **ಏಪ್ರಿಲ್ 26**

## ಒಂದೇ ಭಾಷೆ

ಆದಿಕಾಂಡ 11:1–4 ವಚನಗಳನ್ನು ಓದಿರಿ. ಯಾಕೆ ಭೂಲೋಕದಲ್ಲಿದ್ದ ಎಲ್ಲ ಜನರು ಐಕ್ಯತೆ ಸಾಧಿಸುವುದಕ್ಕೆ ಆಸಕ್ತಿಯುಳ್ಳವರಾಗಿದ್ದರು ಯಾಕೆ?

"ಭೂಲೋಕದ ಎಲ್ಲಾ ಜನರು" ಎಂಬ ಪದವೃಂದವು ಜಲಪ್ರಳಯನಂತರ ಬದುಕಿದ್ದ ಒಂದು ಸಣ್ಣಗುಂಪಿನ ಜನರನ್ನು ಕುರಿತು ಹೇಳುತ್ತದೆ.

ಆ ಜನರು ಗುಂಪಾಗಿ ಕೂಡಿಕೊಡ ಕಾರಣವು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ, ಅವರ ಆಕಾಶವನ್ನು ಮುಟ್ಟುವ ಗೋಪುರವನ್ನು ಕಟ್ಟುವುದಕ್ಕಾಗಿ ಸೇರಿಸಿಕೊಂದಿದ್ದರು (ಆ.ಕಾಂಡ 11:4). ನಿಜವಾಗಿ ಹೇಳಬೇಕೆಂದರೆ, ಅವರು ಸೃಷ್ಟಿಕರ್ತನಾದ ದೇವರ ಸ್ಥಾನವನ್ನು ತೆಗೆದು ಕೊಳ್ಳುವ ಉದ್ದೇಶದಿಂದ ಸೇರಿದ್ದರು. ಗಮನಾರ್ಹವಾಗಿ ಮನುಷ್ಯರ ಉದ್ದೇಶಗಳು ಮತ್ತು ಕಾರ್ಯಗಳನ್ನು ಬಿಂಬಿಸುತ್ತದೆ. "ಅಂದುಕೊಂಡರು" (ಆ.ಕಾಂಡ 11;3,4 ನ್ನು ಆ.ಕಾಂಡ 1:6,9,14 ಇತ್ಯಾದಿ ಹೋಲಿಸಿರಿ) "ಬನ್ನಿ....ಮಾಡೋಣ" (ಆ.ಕಾಂಡ 11:3,4 ನ್ನು ಆ.ಕಾಂಡಾ 1:26 ಜೊತೆ ಹೋಲಿಸಿರಿ) ಅವರ ಉದ್ದೇಶವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ನಾವು.. ದೊಡ್ಡ ಹೆಸರು ಪಡೆಯೋಣ (ಆ.ಕಾಂಡ 11:4) ಇದು ದೇವರಿಗೆ ಮಾತ್ರ ಅನ್ವಯವಾಗುವ ಹೇಳಿಕೆಯಾಗಿದೆ (ಯೆಶಾಯ 63:12,14)

ಸಂಕ್ಷಿಪ್ತವಾಗಿ ಹೇಳುವುದಾದರೆ ಬಾಬೆಲ್ ಗೋಪುರದ ಕಟ್ಟಣಗಾರರು ದೇವರ ಸ್ಥಾನವನ್ನೇ ಪಲ್ಲಟ ಮಾಡುವ ತಪ್ಪಾದ ಆಕಾಂಕ್ಷೆಯನ್ನು ಹೊಂದಿದ್ದರು ( ಅಂತಹ ಆಕಾಂಕ್ಷೆಯನ್ನು ಅವರಲ್ಲಿ ತುಂಬಿರುವರು ಯಾರು ಎಂಬುದನ್ನು ನಮಗೆ ಗೊತ್ತಿದೆ ಅಲ್ಲವೇ? ಯೆಶಾಯ 14:14ನ್ನು ನೋಡಿರಿ). ಜಲಪ್ರಳಯದ ಜ್ಞಾಪಕವು ನಿಶ್ಚಯವಾಗಿಯೂ ಅವರ ಯೋಜನೆಯ ಮೇಲೆ ಒಂದು ಪಾತ್ರವಹಿಸಿರಬೇಕು. ದೇವರ ವಾಗ್ದಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಒಂದು ದೊಡ್ಡ ಗೋಪುರವನ್ನು ಕಟ್ಟತೊಡಗಿದರು. ಬ್ಯಬಿಲೋನಿಯಾದ ಸಂಸ್ಕೃತಿಯಲ್ಲಿ ಜಲಪ್ರಳಯದ ನೆನಪನ್ನು ಸಂರಕ್ಷಿಸಿಕೊಂಡಿದ್ದಾರೆ. ದೇವರ ಚಿತ್ತವನ್ನು ಆಕ್ರಮಣ ಮಾಡಿ ಪರಲೋಕವನ್ನು ತಲುಪಲು ಅವರ ಮೇಲ್ಮುಖವಾಗಿ ಹಾಕಿದ ಪರಿಶ್ರಮವು ಬ್ಯಾಬಿಲೋನಿಯರ ಮನೋಭಾವವನ್ನು ನಿರೂಪಿಸುತ್ತದೆ.

ಆದುದರಿಂದಲೇ ಬಾಬೆಲ್‌ನ ಗೋಪುರದ ಕಥೆಯು ದಾನಿಯೇಲ್ ಪುಸ್ತಕದಾಲ್ಲಿ ಬಹಳ ಮುಖ್ಯವಾದ ಆಶಯವನ್ನು ಹೊಂದಿದೆ. ಬಾಬೆಲ್ ಗೋಪುರದ ಕಥೆಯನ್ನು ಪರಿಚಯಿಸುವ ಶಿನಾರ್ ದೇಶದ ಉಲ್ಲೆಖವು (ಅ.ಕಾಂಡ 11:2) ದಾನಿಯೇಲ್ ಪುಸ್ತಕದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ ನೆಬೂಕದ್ನಚ್ಚರನು ತಾನು ಯೆರೋಸಲೇಮಿನಿಂದ ತಂದಿದ್ದ ಅಲಯದ ಪಾತ್ರೆಗಳನ್ನು ಇಡುವುದಕ್ಕೆ ಈ ಸ್ಥಳವನ್ನು ಗೊತ್ತು ಮಾಡಿದ್ದನು (ದಾನಿಯೇಲ 1:2). ಈ ಪುಸ್ತಕವನ್ನು ಅನೇಕ ಇತರೆ ವಚನಭಾಗಗಳ ಪೈಕಿ

ನೆಬೂಕದ್ನೆಚ್ಚರನ ಬಂಗಾರದ ಪ್ರತಿಮೆಯನ್ನು ಇದೇ ಪ್ರದೇಶದಲ್ಲಿ ನಿಲ್ಲಿಸಿದ ಕಥೆಯು ಅದೇ ತೆರನಾದ ಮನೋಭಾವವನ್ನು ಹೇಳುವಂತಹ ನಿದರ್ಶನವಾಗಿದೆ. ಅಂತ್ಯಕಾಲದ ದರ್ಶನದಲ್ಲೂ ಸಹಾ ದಾನಿಯೇಲನು ಭೂಲೋಕದ ಎಲ್ಲಾ ಜನಾಂಗಗಳು ದೇವರ ವಿರುದ್ಧ ಕೂಡಿಬರುವುದನ್ನು ಕಾಣುತ್ತಾನೆ (ದಾನಿ 2:43, ದಾನಿ 11:43–45) ಈ ವಚನಗಳನ್ನು ಪ್ರಕ 16:14–16 ಕ್ಕೆ ಹೊಲಿಸಿರಿ)

ಬ್ಯಾಬಿಲೋನಿಯ ನಗರವನ್ನು ಕಟ್ಟುವ ಸಂಬಂಧವಾಗಿ ಸ್ವಲ್ಪ ವ್ಯತ್ಯಸವಾಗಿಯೂ ಹೇಗೆ ಬಾಬಿಲ್ ಗೋಪುರ ಕಟ್ಟುವುದು ವಿಫಲವಾಯ್ತೋ ಹಗೆಯೇ ಅಂತ್ಯಕಾಲದ ಜನರ ಪ್ರಯತ್ನವು ವಿಫಲವಾಗುವುದು.

ಕಳೆದ ಶತಮಾನದ ಒಬ್ಬ ಪ್ರಸಿದ್ಧ ಫ್ರೆಂಚ್ ಲೇಖಕನು "ಮನುಷ್ಯನ ಮಹಾ ಉದ್ದೇಶವು ತಾನು ದೇವರಂತೆ ಆಗುವುದಕ್ಕೆ ಪ್ರಯತ್ನಿಸುವುದು" ಎಂದು ಹೇಳುತ್ತಾನೆ. ಏದೇನ್ ತೋಟದಲ್ಲಿ ಹವ್ವಳನ್ನು ಮೊದಲುಗೊಂಡು (ಆ.ಕಾಂಡ 3:5) ನಮ್ಮ ತನಕ ಈ ಅಪಾಯಕರ ಸುಳ್ಳಿಗೆ ಮರುಳಾಗುವುದರ ಬಗ್ಗೆ ಏನು ಹೇಳುವಿರಿ?

**ಬುಧವಾರ** **ಏಪ್ರಿಲ್–27**

## "ನಾವು ಇಳಿದು ಹೋಗೋಣ"

ಆದಿಕಾಂಡ 11:5–7 ಮತ್ತು ಕೀರ್ತಿ 139:7–12ನ್ನು ಓದಿರಿ. ದೇವರು ಇಲ್ಲಿ ಯಾಕೆ ಭೂಮಿಗೆ ಇಳಿದು ಬಂದನು? ದೈವೀಕ ಪ್ರತಿಕ್ರಿಯೆಯನ್ನು ಪ್ರೇರೇಪಿಸಿದ ಘಟನೆ ಯಾವುದು?

ವಿಪರ್ಯಾಸವೇನೆಂದರೆ ಮನುಷ್ಯರು ಮೇಲೆ ಮೇಲೆ ಹೋಗುತ್ತಿದ್ದಾಗೂ ದೇವರು ಅವರನ್ನು ಸಂಧಿಸಲು ಕೆಳಕ್ಕೆ ಇಳಿದು ಬರಬೇಕಾಯ್ತು. ದೇವರು ಕೆಳಕ್ಕೆ ಇಳಿದು ಬಂದದು ಆತನ ಪಾರಮ್ಯವನ್ನು ದೃಢೀಕರಿಸುತ್ತದೆ. ದೇವರು ಯಾವಾಗಲು ಮಾನವನ ಕೈಗೆ ಎಟಕುವುದಿಲ್ಲ. ಆತನ ಸಮೀಪಕ್ಕೆ ಏರಿಹೋಗಲು ಮಾಡುವ ಮಾನವ ಪರಿಶ್ರಮವು ಕೇವಲ ವ್ಯರ್ಥ ಮತ್ತು ಹಾಸ್ಯಾಸ್ಪದ. ಖಂಡಿತವಾಗಿ ನಮ್ಮನ್ನು ರಕ್ಷಿಸುವ ಸಲುವಾಗಿ ಯೇಸುವು ಬೇರೆ ದಾರಿಯಿಲ್ಲದೆ ನಮ್ಮ ಮಧ್ಯೆ ಇಳಿದುಬಂದನು.

ಬಾಬೆಲ್ ಗೋಪುರದ ವಿವರಣೆಯಲ್ಲಿ ದೇವರ ಹೇಳಿಕೆಯಲ್ಲಿ ಒಂದು ದೊಡ್ಡ ಪರಿಹಾಸವನ್ನು ಕಾಣುತ್ತೇವೆ. ಅದೇನೆಂದರೆ "ಪಟ್ಟಣವನ್ನೂ ಗೋಪುರವನ್ನು

ನೋಡುವುದಕ್ಕೆ ಕರ್ತನು ಇಳಿದು ಬಂದನು" (ಆ.ಕಾಂಡ 11:5) ಎಂಬುದು. ದೇವರು ನೋಡುವ ಸಲುವಾಗಿ ಇಳಿದು ಬರಬೇಕಾಗಿರಲಿಲ್ಲ (ಕೀರ್ತ 139:7–12) ಇದನ್ನು ಕೀರ್ತ 2:4 ಕ್ಕೆ ಹೋಲಿಸಿರಿ) ಆದರೆ ಹೀಗೂ ದೇವರು ನಮ್ಮ ಬಳಿಗೆ ಇಳಿದು ಬರುವ ಬಗ್ಗೆ ಇದು ಏನನ್ನು ನಮಗೆ ಬೋಧಿಸುತ್ತದೆ?

ದೇವರು ಇಳಿದು ಬರುವಿಕೆಯು ನಂಬಿಕೆಯಿಂದ ನೀತಿ ಎಂಬ ನಿಯಮವನ್ನೂ ಸಹಾ ನಮಗೆ ನೆನಪು ಮಾಡುತ್ತದೆ. ನಾವು ದೇವರ ಸಲುವಾಗಿ ಯಾವುದೇ ಕೆಲಸವನ್ನು ಮಾದ್ದರೂ ಆತನು ನಮ್ಮನ್ನು ಸಂಧಿಸುವ ಸಲುವಾಗಿ ಇಳಿದು ಬರಲೇಬೇಕು. ನಾವು ಆತನಿಗೆ ಏನು ಮಾಡುತ್ತೇವೆಯೇ ಅದು ಆತನನ್ನು ನಮ್ಮ ಬಳಿಗೆ ಕರೆದು ತರುವುದಿಲ್ಲ, ಬದಲಾಗಿ ನಮ್ಮನ್ನು ರಕ್ಷಿಸುವುದಕ್ಕಾಗಿ ದೇವರು ತಾನಾಗಿಯೇ ನಮ್ಮ ಕಡೆಗೆ ಬರುತ್ತಾನೆ. ಸಂಗತಿ ಏನೆಂದರೆ ಆದಿಕಾಂಡದ ವಚನವು ದೇವರು ಇಳಿದು ಬರುವುದರ ಬಗ್ಗೆ ಎರಡು ಸಲ ಮಾತಾಡುತ್ತದೆ ಇದು ಇಲ್ಲಿ ನಡೆಯುವದರ ಬಗ್ಗೆ ಎಷ್ಟು ಲಕ್ಷ್ಯವಹಿಸುತಾನೆ ಎಂಬುದನ್ನು ಸೂಚಿಸುತ್ತದೆ.

ವಚನದ ಪ್ರಕಾರ ದೇವರು ಅವರಲ್ಲಿದ್ದ ಬಲವಾದ ಐಕ್ಯತೆಗೆ ಒಂದು ಅಂತ್ಯವನ್ನು ಕಾಣಿಸಬೇಕಾಗಿತ್ತು ಯಾಕೆಂದರೆ ಅವರ ಪಾಪದಿಂದ ಸ್ವಭಾವವು ಅವರನ್ನು ಹೆಚ್ಚು ಕೆಟ್ಟತನಕ್ಕೆ ನಡೆಸುತಿತ್ತು. ಆದುದರಿಂದ ಆತನು ಅವರಿಗೆ ಗೊಂದಲವನ್ನು ಉಂಟುಮಾಡಿ ಅವರು ಒಂದಾಗಿ ಮಡುತ್ತಿದ್ದ ಕಾರ್ಯವನ್ನು ನಿಲ್ಲಿಸುವುದಕ್ಕಾಗಿ ಅವರ ಭಾಷೆಯನ್ನು ತಾರುಮಾರು ಮಾಡಿದನು.

"ಬಾಬೆಲ್ ನಲ್ಲಿ ಗೋಪುರ ಕಟ್ಟುತ್ತಿದ್ದ ಕಟ್ಟಣಗಾರರು ಅವಮಾನದಿಂದಲೂ ನೋಲಿನಿಂದಲೂ ಅಂತ್ಯಕಾಣಬೇಕಾಯ್ತು. ಹೆಮ್ಮೆ ಪಟ್ಟುಕೊಳ್ಳಬೇಕಾದ ಸ್ಮಾರಕವು ಅವರ ಮೂರ್ಖತನವನ್ನು ನೆನಪಿಸುವ ಸ್ಮಾರಕವಾಯಿತು. ಆದಾಗ್ಯೂ ಜನರು ನಿರಂತವಾಗಿ ಅಂತಹುದೇ ಮಾರ್ಗವನ್ನು ಅಂದರೆ ಸ್ವಂತ ಬುದ್ಧಿಯನ್ನು ಅವಲಂಬಿಸಿಕೊಂಡು ದೇವರ ಆಜ್ಞೆಗಳನ್ನು ತಿರಸ್ಕಾರ ಮಾಡತೊಡಗುತ್ತಾರೆ. ಅಂತಹ ತತ್ವವನ್ನು ಸೈತಾನನು ಪರಲೋಕದಲ್ಲಿ ನಡೆಸಲು ಪ್ರಯತ್ನಿಸಿದನು ಅದೇ ಸೂತ್ರವು ಕಾಯಿನನು ಕಾಣಿಕೆಯನ್ನು ಅರ್ಪಿಸುವಾಗ ಅವನ ಮೇಲೆ ಆಳಿಕೆ ಮಾಡಿತು" ಎಲೆನ್‌ಜಿ ವೈಟಮ್ಮನವರ" ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 123ನೇ ಪುಟ.

ಮಾನವನು ಅಂತಿಮವಾಗಿ ಹೇಗೆ ಸೋಲುತ್ತಾನೆಂದು ದುರಹಂಕಾರದ ಉದಾಹರಣೆಯಲ್ಲಿ ಹೇಗೆ ಕಾಣುತ್ತೇವೆ? ವಯಕ್ತಿಕವಾಗಿ ಎಂತಹ ಪಾಠಗಳನ್ನು ನಾವು ಈ ಕಥೆಯಿಂದ ತೆಗೆದುಕೊಳ್ಳಬಹುದು?

**ಗುರುವಾರ** **ಏಪ್ರಿಲ್ 28**

## ಹೊರಹಾಕಲ್ಪಟ್ಟವರ ವಿಮೋಚನೆ

ಓದಿರಿ ಆದಿಕಾಂಡ 11:8,9 ಮತ್ತು 9:1 ನೇ ವಚನಗಳನ್ನು ಆದಿಕಾಂಡ 1:28 ನೇ ವಚನಕ್ಕೆ ಹೋಲಿಸಿರಿ. ದೇವರು ಜನರನ್ನು ಚದುರಿಸುದುದು ಅವರ ವಿಮೋಚನಾರ್ಥವಾಗಿದೆ ಯಾಕೆ?

ಮನುಷ್ಯರು ಬಹುಸಂತಾನವುಳ್ಳವರಾಗಿ ಹೆಚ್ಚ ಬೇಕು ಮತ್ತು ಭೂಲೋಕದಲ್ಲೆಲ್ಲ ತುಂಬಿಕೊಳ್ಳಬೇಕೆಂಬುದು ದೇವರ ಸಂಕಲ್ಪ ಮತ್ತು ಆಶೀರ್ವದವಾಗಿದೆ (ಆ.ಕಾಂಡ 9:1 ನ್ನು ಆ.ಕಾಂಡ 1:28 ಕ್ಕೆ ಹೋಲಿಸಿರಿ). ದೇವರ ಯೋಜನೆಗೆ ವ್ಯತಿರಿಕ್ತವಾಗಿ ಬಾಬೆಲ್ ಗೋಪುರವನ್ನು ಕಟ್ಟುವವರು ಒಂದೇ ಜಾಗದಲ್ಲಿ ಒಂದೇ ಜನಾಂಗವಾಗಿ ಉಳಿಯುವ ಪ್ರಯತ್ನ ಮಾಡಿದರು.

ತಾವೆಂದಿಗೂ ಭೂಲೊಕದಲ್ಲಿ ಚದುರಿಹೋಗದಂತೆ ಒಂದೇ ಸ್ಥಳದಲ್ಲಿ ಒಟ್ಟಾಗಿ ವಾಸಿಸಬೇಕೆಂಬುದು ಗೋಪುರ ಕಟ್ಟುವುದರ ಒಂದು ಕಾರಣವಾಗಿತ್ತು (ಆ.ಕಾಂಡ 11:4). ಅವರು ಎಲ್ಲಿಗೂ ಚದುರಿಹೋಗಲು ನಿರಾಕರಿಸಿದರು ಪ್ರಾಯಶಃ ತಾವು ಪ್ರತ್ಯೇಕವಾಗಿ ಹೋಗದೆ ಒಂದಾಗಿದ್ದರೆ ಬಹಳ ಬಲವಾಗಿರಬಹುದು ಎಂಬ ಅಲೋಚನೆಯು ಅವರದಾಗಿತ್ತು. ಒಂದು ಅರ್ಥದಲ್ಲಿ ಅವರ ಆಲೋಚನೆ ಸರಿಯಾಗಿತ್ತು.

ದೌರ್ಭಾಗ್ಯವೆಂದರೆ ಐಕ್ಯತೆಯ ಶಕ್ತಿಯನ್ನು ಒಳ್ಳೆಯದಕ್ಕೆ ಉಪಯೋಗಿಸದೆ ಕೆಟ್ಟದಕ್ಕೆ ಉಪಯೋಗಿಸಲು ಬಯಸಿದರು. ತಾವು ದೊಡ್ಡಹೆಸರನ್ನು ಪಡೆಯಬೇಕೆಂಬುದು ಅವರ ಬಯಕೆಯಾಗಿತ್ತು. ಅದು ಅವರಲ್ಲಿದ್ದ ಅಹಂಕಾರ ಮತ್ತು ಗರ್ವಗಳನ್ನು ಪ್ರತಿಬಿಂಬಿಸುತ್ತಿದ್ದವು. ನಿಜ, ಮನುಷ್ಯರು ದೇವರನ್ನು ನೇರವಾಗಿ ಎದುರಿಸುವಾಗಲೆಲ್ಲಾ ತಾವು ಹೆಸರು ಮಾಡಿಕೊಳ್ಳಬೇಕೆಂದು ಬಯಸುತ್ತಾನೆ. ಖಂಡಿತವಾಗಿಯೂ ಇದು ಒಳ್ಳೆಯದಾಗಿ ಪರಿಣಮಿಸುವುದಿಲ್ಲವೆಂದು ನಮಗೆ ಗೊತ್ತಿರುತ್ತದೆ. ಹಾಗೆ ಎಂದಿಗೂ ಆಗುವುದಿಲ್ಲ.

ಆದುದರಿಂದ ಅವರು ತೋರಿದ ಪೂರ್ಣವಾದ ಉದ್ಧಟತನಕ್ಕೆ ಪ್ರತಿಯಾಗಿ ತಕ್ಕ ರೀತಿಯಲ್ಲಿ ದೇವರು ಅವರನ್ನು ಭೂಲೋಕದಲ್ಲೆಲ್ಲಾ ಚದುರಿ ಹೋಗುವಂತೆ ಮಾಡಿದನು (ಆದಿಕಾಂಡ 11:9) ಯಾವುದು ಆಗಬಾರದೆಂದು ಬಯಸಿದ್ದರೋ ಅದೇ ಆಯಿತು.

ಸಾಕಷ್ಟು ಆಸಕ್ತಿಕರವಾದುದೇನೆಂದರೆ ದೇವರ ಬಾಗಿಲು ಎಂಬ ಅರ್ಥವನ್ನು ಹೋದಿದ್ದ ಬಾಬೆಲ್ ಎಂಬ ಹೆಸರು ಬಲಾಲ್ ಎಂಬ ಕ್ರಿಯಾಪದಕ್ಕೆ ಸಬಂಧಿಸುತ್ತದೆ ಹಾಗೆಂದರೆ ಅದರ ಅರ್ಥ 'ತಾರುಮರು' ಎಂಬುದಾಗಿದೆ (ಆ.ಕಾಂಡ 11:9) ಯಾಕೆಂದರೆ ಅವರು ತಮ್ಮನ್ನು ತಾವು ದೇವರು ಎಂದುಕೊಂಡು ದೇವರ ಬಾಗಿಲನ್ನು ಸೇರಬೇಕೆಂದುಕೊಂಡಿದ್ದರು ಆದರೆ ಅದು ಗೊಂದಲದಲ್ಲಿ ಕೊನೆಗೋಂಡಿತು ಮತ್ತು ಅವರು ಮೊದಲಿಗಿಂತ ಹೆಚ್ಚು ಬಲಹೀನರಾದರು.

ಬಾಬೆಲ್ನ ಜನರು ದೇವರ ಆಡಳಿತಕ್ಕೆ ಒಳಪಡದೆ ಒಂದು ಸರ್ಕಾರವನ್ನು ಸ್ಥಾಪನೆ ಮಾಡಬೇಕೆಂದು ತಮ್ಮನ್ನು ದೃಢಪಡಿಸಿಕೊಂಡರು. ಏನೇ ಆಗಲಿ ಅವರ ಮಧ್ಯದಲ್ಲೂ ಸಹ ದೇವರಿಗೆ ಭಯಪಡುವವರು ಇದ್ದರು ಆದರೆ ಅವರು ಭಕ್ತಿ ಹೀನರ ಹೊರತೋರಿಕೆಯಿಂದ ಮೋಸಕ್ಕೆ ಒಳಗಾಗಿ ಅವರ ಕುಯುಕ್ತಿಗೆ ಬಲಿಯಾದರು. ದೇವರು ತನ್ನಲ್ಲಿ ನಂಬಿಗಸ್ತರಾದ ಜನರ ಸಲುವಾಗಿ ತನ್ನ ನ್ಯಾಯತೀರ್ಪನ್ನು ಕೊಡುವುದಕ್ಕೆ ತಡಮಾಡುತ್ತಾನೆ ಮತ್ತು ಜನರಿಗೆ ತಮ್ಮ ನಿಜವಾದ ಸ್ವಭಾವವನ್ನು ತೋರಿಸಿಕೊಳ್ಳಲು ಸಮಯಾವಕಾಶವನ್ನು ನೀಡುತ್ತಾನೆ. ಈ ಬೆಳವಣಿಗೆಯು ಅದರಂತೆ ಅವರನ್ನು ಅವರ ಉದ್ದೇಶದಿಂದ ತಿರುಗಿಸಲು ದೇವರ ಮಕ್ಕಳು ಶ್ರಮೆ ಪಡುತ್ತಾರೆ ಆದರೆ ಪರಲೋಕದ ವಿರುದ್ಧವಾದ ಕಾರ್ಯಗಳನ್ನು ತಡೆಯದೆ ಹೋಗಿದ್ದರೆ ಇಡೀ ಲೋಕವು ತನ್ನ ಶೈಶಾವಸ್ಥೆಯಲ್ಲಿಯೇ (ಆರಂಭದಲ್ಲಿಯೇ) ಭ್ರಷ್ಟವಾಗಿ ಬಿಡುತ್ತಿತ್ತು.

ಅವರ ಮೈತ್ರಿಯು ದೇವರಿಗೆ ವಿರುದ್ಧವಾಗಿ ಸ್ಥಾಪನೆಗೊಂಡಿತ್ತು. ತಮ್ಮನ್ನು ತಾವು ಹೆಚ್ಚಿಸಿಕೊಳ್ಳುವುದಕ್ಕೆ ಒಂದು ರಾಜ್ಯವು ಸ್ಥಾಪನೆಗೊಂಡಿತ್ತು ಆದರೆ ಅಲ್ಲಿ ದೇವರ ಆಡಳಿತವಿರುವುದಿಲ್ಲ. ಆತನಿಗೆ ಗೌರವವೂ ಇರುವುದಿಲ್ಲ"– ಎಲೆನ್‌ಜಿ ವೈಟಮ್ಮನವರ ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 123ನೇ ಪುಟ.

ನಮ್ಮಷ್ಟಕ್ಕೆ ನಾವು ಹೆಸರು ಮಾಡಲು ಪ್ರಯತ್ನ ಪಡುವ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು ಏಕೆ?

**ಶುಕ್ರವಾರ** **ಏಪ್ರಿಲ್–29**

**ಹೆಚ್ಚಿನ ಚಿಂತನೆಗಾಗಿ:** ಎಲೆನ್ ಜಿ ವೈಟಮ್ಮನವರ ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು ಪುಸ್ತಕದಲ್ಲಿ ಬಾಬೆಲ್ ನ ಗೋಪುರ ಎಂಬ ಅಧ್ಯಾಯವನ್ನು ಪುಟ 117 ರಿಂದ 124 ರವರಿಗೆ ಓದಿರಿ.

ಅವರು ಒಂದು ಪಟ್ಟಣವನ್ನು ಕಟ್ಟುವುದಕ್ಕೆ ಮತ್ತು ಅದರಲ್ಲಿ ಅತಿ ಉನ್ನತವಾದ ಗೋಪುರವನ್ನು ನಿರ್ಮಿಸುವುದಕ್ಕೆ ನಿರ್ಧರಿಸಿದರು. ಈ ಕಾರ್ಯಗಳು ಜನರನ್ನು ದೂರಕ್ಕೆ ಚದುರಿಹೋಗದಂತೆ ತಡೆಯಲು ವಿನ್ಯಾಸಗೊಂಡಿದ್ದವು. ದೇವರು ಜನರನ್ನು ಭೂಮಿಯ ತುಂಬ ಚದುರಿಕೊಳ್ಳಬೇಕೆಂದು ಮತ್ತು ಅದನ್ನು ವಶಪಡಿಸಿಕೊಳ್ಳಬೇಕೆಂದು ನಿರ್ದೇಶಿಸಿದ್ದನು. ಆದರೆ ಬಾಬೆಲ್ ಗೋಪುರವನ್ನು ಕಟ್ಟುವವರು ತಮ್ಮ ಸಮುದಾಯವು ಐಕ್ಯತೆಯಿಂದ ಅಖಂಡವಾಗಿರಬೇಕೆಂದು ಮತ್ತು ಇಡೀ ಲೋಕದವರ ಗೌರವಕ್ಕೆ ಮತ್ತು ಮೆಚ್ಚುಗೆಗೆ ಪಾತ್ರವಾಗಿ ಅದನ್ನು ಕಟ್ಟಿದವರು ಸುಪ್ರಸಿದ್ಧರಾಗಬೇಕೆಂದು ಬಯಸಿದರು. ಮೇಲ್ಲೋಕವನ್ನು (ಆಕಾಶವನ್ನು) ಮುಟ್ಟುವಂತಿದ್ದ ಮಹಾಗೋಪುರವು ಅದನ್ನು ಕಟ್ಟಿದವರ ಬುದ್ಧಿಶಕ್ತಿ ಮತ್ತು ಪರಾಕ್ರಮಕ್ಕೆ ಸ್ಮಾರಕವಾಗಿ ನಿಲ್ಲಬೇಕೆಂಬ ಅದರ ಖ್ಯಾತಿ ಮುಂದಿನ ತಲೆಮಾರಿನವರಿಗೂ ತಲುಪಬೇಕೆಂಬ ಉದ್ದೇಶಹೊಂದಿತ್ತು.

ದೇವರು ಮತ್ತೆಂದಿಗೂ ಭೂಮಿಯನ್ನು ಜಲಪ್ರಳಯದಿಂದ ನಾಶಮಾಡುವುದಿಲ್ಲವೆಂದು ಮಾಡಿದ ವಾಗ್ದಾನವನ್ನು ಶಿನಾರ್ ದೇಶದಲ್ಲಿ ವಾಸವಾಗಿದ್ದ ಜನರು ನಂಬದೆಹೋದರು. ಅವರಲ್ಲಿ ಅನೇಕರು ದೇವರ ಅಸ್ತಿತ್ವವನ್ನೇ ನಿರಾಕರಿಸಿದರು ಮತ್ತು ಜಲಪ್ರಳಯವು ಪ್ರಾಕೃತಿಕ ಕಾರಣದಿಂದ ಉಂಟಾಯಿತು ಎಂದು ವಾದಿಸಿದರು. ಇತರರು ಪರಮೋನ್ನತನನ್ನು ನಂಬಿದರು, ಅವರು ಈ ಲೋಕವು ಜಲಪ್ರಳಯದಿಂದ ನಾಶವಾದುದಕ್ಕೆ ಆತನೆ ಕಾರಣನೆಂದು ಕಾಯಿನನಂತೆ ದೇವರಿಗೆ ವಿರೋಧವಾಗಿ ತಿರುಗಿಬಿದ್ದರು.

ಮತ್ತೊಮ್ಮೆ ಜಲಪ್ರಳಯ ಸಂಭವಿಸಿದರೆ ಅದರಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಒಂದು ಉದ್ದೇಶದಿಂದ ಗೋಪುರವನ್ನು ನಿರ್ಮಿಸಲು ಮುಂದಾದರು ಜಲಪ್ರಳಯದಲ್ಲಿ ಮೇಲೇರಿ ಬಂದ ನೀರಿನ ಮಟ್ಟಕ್ಕಿಂತಲೂ ಹೆಚ್ಚಿನ ಎತ್ತರಕ್ಕೆ ಗೊಪುರವನ್ನು

ಕಟ್ಟುವುದರಿಂದ ಎಲ್ಲ ಅಪಾಯದಿಂದ ತಮ್ಮನ್ನು ತಪ್ಪಿಸಬಹುದು ಎಂದು ಭಾವಿಸಿದರು ಮತ್ತು ಗೋಪುರವನ್ನು ಏರಿಹೋಗಿ ಮೋಡಗಳನ್ನು ಮುಟ್ಟಿದಾಗ ಜಲಪ್ರಳಯಕ್ಕೆ ಕಾರಣವನ್ನು ತಿಳಿದುಕೊಳ್ಳಬಹುದೆಂದು ಆಲೋಚಿಸಿದರು. ಗೋಪುರದ ಯೋಜನೆಯನ್ನು ಮಾಡಿದವರ ಗರ್ವವನ್ನು ಇನ್ನೂ ಹೆಚ್ಚುವ ಹಾಗೆ ಇಡೀ ಕಟ್ಟಡವನ್ನು ವಿನ್ಯಾಸ ಮಾಡಲಾಗಿತ್ತು. ಮುಂದಿನ ಸಂತತಿಯವರ ಮನಸ್ಸನ್ನು ದೇವರಿಂದ ತಿರುಗಿಸಿ ಅವರನ್ನು ವಿಗ್ರಹಾರಧನೆಗೆ ನಡೆಸುವುದೇ ಅದರ ಮುಖ್ಯ ಉದ್ದೇಶವಾಗಿತ್ತು" ಎಲೆನ್ ಜಿ ವೈಟಮ್ಮ ನವರ 'ನಮ್ಮ ಪೂರ್ವಿಕರು ಮತ್ತು ಪ್ರವಾದಿಗಲು' ಪುಸ್ತಕದಲ್ಲಿ ಪುಟ 118,119.

## ಚರ್ಚಿಸಬೇಕಾದ ಪ್ರಶ್ನೆಗಳು

1. ತಾವು ದೊಡ್ಡ ಹೆಸರು ಮಾಡಬೇಕೆಂದು ಪ್ರಯತ್ನ ಪಡುವವರಿಗೆ ತೊಂದರೆಗಳು ಬರುತ್ತವೆ ಎಂಬುದಕ್ಕೆ ಚರಿತ್ರೆಯಲ್ಲಿ ಅಥವಾ ಪುಸ್ತಕ ಕಾಲದಲ್ಲಿ ಎಂತಹ ಉದಾಹರಣೆಗಳು ನಮಗೆ ಸಿಗುತ್ತದೆ?

2. ಸಭೆಯಲ್ಲಿ ನಾವು ನಮ್ಮ ಸ್ವಂತ ಬಾಬೆಲ್ ಗೋಪುರವನ್ನು ಕಟ್ಟುವ ಪ್ರಯತ್ನದಿಂದ ಆಗುವ ಅಪಾಯವನ್ನು ಹೇಗೆ ತಪ್ಪಿಸಬಹುದು? ನಮಗೆ ಅರಿವಿಲ್ಲದಂತೆ ನಮ್ಮ ಸುಪ್ತಮನಸ್ಸಿನಲ್ಲಿ ಹೀಗೆ ಪ್ರಯತ್ನ ಮಾಡುವ ವಿಧಾನಗಳಾವುವು?